ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿಗೆ ಮಾನ್ಯತೆ ಕೊಡುವ ಬಗ್ಗೆ ಪ್ರಸ್ತಾಪ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಹೋದಸಾರಿ ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂಬ ಪ್ರಾತನ್ನು ಹಿಂದಿನ ಸರ್ಕಾರದವರು ಹೇಳಿದ್ದರು. ಅದೇ ರೀತಿಯಾಗಿ ಎನ್.ಕೆ. ಪ್ರಭಾಕರ್ ಅವರನ್ನು ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷರನ್ನಾಗಿ ಗೌರ್ನರ್‌ರವರು ನೇಮಕ ಮಾಡಿದ್ದು ಪತ್ರಿಕೆಯಲ್ಲಿ ಬಂದಿತ್ತು. ಈ ಬೋರ್ಡಿಗೆ ಪ್ಲಾನಿಂಗ್ ಕಮೀಷನ್‌ನವರು ಒಪ್ಪಿಗೆ ಕೊಟ್ಟರೆ ನಾವು ಹೆಚ್ಚು ಹಣ ಕೊಡುತ್ತೇವೆ ಎಂದು ಹಿಂದೆ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಹೇಳಿದ್ದರು. ಏಕೆಂದರೆ, ಪ್ಲಾನ್ ಸ್ಕೀಮಿನಲ್ಲೇ ಅನೇಕ ಕೆಲಸಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ರೋಡ್‌ಗಳು, ಬ್ರಿಡ್ಜ್‌ಗಳು–ಇಂಥ ಕೆಲಸಗಳು ನಾನ್ ಪ್ಲಾನ್‌ನಲ್ಲಿ ಬರುತ್ತವೆ. ಆ ಕೆಲಸಗಳನ್ನು ಪ್ಲಾನ್ಡ್ ಸ್ಕೀಮಿನಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಪ್ಲಾನಿಂಗ್ ಕಮೀಷನ್‌ನವರು ಈ ಬೋರ್ಡಿಗೆ ಮಾನ್ಯತೆ ಕೊಟ್ಟರೆ ಅಥವಾ ಆ ಭಾಗಕ್ಕೆ ಇದು ಆಗಬೇಕೆಂದು ಹೇಳಿದರೆ ಖಂಡಿತವಾಗಿ ಆ ಕೆಲಸಗಳನ್ನು ಮಾಡಿಸುತ್ತೇನೆಂದು ಅವರು ಹೇಳಿದ್ದರು. ಈಗ ಅವರೇ ಪ್ಲಾನಿಂಗ್ ಕಮೀಷನ್ ಡೆಪ್ಯೂಟಿ ಛೇರ್ಮನ್ ಆಗಿದ್ದಾರೆ. ಎರಡನೇ ತಾರೀಖು ಅವರ ಜೊತೆ ಚರ್ಚೆಗೆ ಪ್ಲಾನಿಂಗ್ ಮಿನಿಸ್ಟರ್ ಮತ್ತು ಮುಖ್ಯಮಂತ್ರಿಯವರು ಹೋಗುತ್ತಾರೆಂದು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಒಂದು ವೇಳೆ ಪ್ಲಾನಿಂಗ್ ಕಮೀಷನ್ನಿನ ಡೆಪ್ಯೂಟಿಛೇರ್ಮನ್ ಅವರ ಹತ್ತಿರ ಹೋದರೆ ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಚರ್ಚೆ ಮಾಡಿ ಅದಕ್ಕೆ ಮಾನ್ಯತೆ ಕೊಡಿಸಿ, ಕೇಂದ್ರ ಸರ್ಕಾರದಿಂದ ಧನಸಹಾಯ ಕೊಡಿಸುವಂತೆ ಕೇಳಬೇಕು. ಯಾವ ರೀತಿಯಾಗಿ ವೆಸ್ಟ್ ಬಂಗಾಳದಲ್ಲಿ, ಮಹಾರಾಷ್ಟ್ರದಲ್ಲಿ ಕೊಡಿಸಿದ್ದಾರೊ ಅದೇ ರೀತಿಯಾಗಿ ಇಲ್ಲಿಗೂ ಕೊಡಿಸಬೇಕು. ಪ್ರಾಪರ್ ಹೈದರಾಬಾದಿಗೆ ೧೦೦ ಕೋಟಿ ರೂಪಾಯಿನ ಒಂದು ಪ್ರಾಜೆಕ್ಟನ್ನು ಶ್ರೀಮತಿ ಇಂದಿರಾಗಾಂಧಿಯವರು ಅಪ್ರೂವ್ ಮಾಡಿದ್ದರು. ರೋಡ್‌ಗಳ ಅಭಿವೃದ್ಧಿಗೆ ಮತ್ತು ಹಳೇ ವಸತಿಗಳ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಪ್ರಾಜೆಕ್ಟ್ ಮಾಡಿದ್ದರು. ಅದೇ ರೀತಿಯಾಗಿ ಕರ್ನಾಟಕದ ವಿಚಾರವನ್ನೂ ಪ್ಲಾನಿಂಗ್ ಕಮಿಷನ್ ಮುಂದೆ ಇಟ್ಟು ಇದಕ್ಕೆ ಮಾನ್ಯತೆ ದೊರಕಿಸಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಲಿ ಏನಿದೆ, ಅದಕ್ಕೆ ಈಗ ಸದ್ಯ ಎಗ್ಸಿಕ್ಯುಟೀವ್ ಆರ್ಡರ್‌ಪ್ರಕಾರ ಒಂದು ಮಂಡಲಿಯನ್ನು ಮಾಡಿದ್ದೇವೆ. ಅದಕ್ಕೆ ಒಬ್ಬರು ಅಧ್ಯಕ್ಷರನ್ನೂ ಕೂಡ ಮಾಡಿದ್ದೇವೆ. ಆದರೆ ಅದಕ್ಕೆ ಬೇಕಾದ ಪದಾಧಿಕಾರಿಗಳನ್ನು ಇನ್ನು ನೇಮಕ ಮಾಡಿಲ್ಲ. ಸನ್ಮಾನ್ಯ ಸದಸ್ಯರು ಕೊಟ್ಟ ಸೂಚನೆ ಸರ್ಕಾರದ ಗಮನದಲ್ಲಿದೆ. ನಾವು ಎರಡನೇ ತಾರೀಖು ಯೋಜನಾ ಆಯೋಗದ ಜೊತೆಯಲ್ಲಿ ಸಮಾಲೋಚನೆ ಮಾಡುವಾಗ ಹೈದರಾಬಾದ್ ಕರ್ನಾಟಕ ಬೋರ್ಡಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇವೆ. ಏಕೆಂದರೆ, ಯೋಜನೆಗೆ ಬರತಕ್ಕ ಹಣವನ್ನು ವಿಂಗಡಣೆ ಮಾಡುವುದರಲ್ಲಿ ಅರ್ಥವಿಲ್ಲ. ಹೆಚ್ಚು ಹಣ ಕೊಡುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅದಕ್ಕೇ ಪ್ರತ್ಯೇಕವಾಗಿ ಏನಾದರೂ ಅನುದಾನ ಕೊಡುವ ವಿಷಯದ ಬಗ್ಗೆ ಯೋಜನಾ ಆಯೋಗವನ್ನು ಒತ್ತಾಯ ಮಾಡಬೇಕೆಂಬ ಅಲೋಚನೆ ನಮ್ಮಲ್ಲಿದೆ, ಮೊನ್ನೆ ೧೯ನೇ ತಾರೀಖು ಅಧಿಕಾರಿಗಳ ಮಟ್ಟದ ಸಭೆಯಲ್ಲಿ ಚರ್ಚೆಯಾದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ೨ನೇ ತಾರೀಖು ಹೋದಾಗ ಈ ವಿಚಾರಗಳನ್ನು ಸಹಾ ಪ್ರಸ್ತಾಪ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರೇ, ಈ ಎರಡು ದಿವಸಗಳ ಅಲ್ಪಕಾಲೀನ ಅಧಿವೇಶನದಲ್ಲಿ ತಾವು ಕೊಟ್ಟ ಸಹಕಾರಕ್ಕೆ ಧನ್ಯವಾದಗಳನ್ನು ಸಮರ್ಪಿಸಿ ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ ನಾಲ್ಕು ಗಂಟೆ ಇಪ್ಪತ್ತೊಂದು ನಿಮಿಷಗಳ ಸಮಯದಲ್ಲಿ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು).